ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಹೆಂಡತಿಯನ್ನು ಮನೆಯ ದೀಪ ಎನ್ನುತ್ತಾರೆ. ಗಂಡನನ್ನು?



ಎಣ್ಣೆ ಹಾಕುವವನು, ಬತ್ತಿ ಇಡುವವನು, ಕಿಡಿ ಕಾರುವವನು...

ಮಲ್ಲಿಕಾರ್ಜುನ, ಸುರಧೇನುಪುರ

ಇಲ್ಲೊಬ್ಬಳು ಫೋನಿಲ್ಲದ ನಾನು ನೀರಿಲ್ಲದ ಮೀನು ಎನ್ನುತ್ತಿದ್ದಾಳಲ್ಲ?

‘ಮೀನು ಜೀವಿಸುವುದು ನೀರಿನಲ್ಲೇ; ಅದು ಬೇಯುವುದೂ ಅದರಲ್ಲೇ’ ಎಂದು ನೆನಪಿಸಿ.

ವಿಜಯಕುಮಾರ್ ಎಚ್.ಕೆ. ರಾಯಚೂರು

ತಾವೇ ಸರ್ವಜ್ಞರೆಂದುಕೊಂಡು ಅನ್ಯರಲ್ಲಿ ತಪ್ಪು ಹುಡುಕುವುದನ್ನು ನಿಲ್ಲಿಸಿ ಕೆಲವರು ವಾಸ್ತವ ಜಗವನ್ನರಿವುದೆಂದು?

ಅವರಂತೆಯೇ, ಅವರಿಗಿಂತ ಅತಿ ಆಡುವವರು ದೊರಕಿದಂದು.

ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ಅಂದು ನಸುಕಿನಲ್ಲಿ ಕೋಳಿ ಕೂಗಿದರೆ ಬೆಳಗಾಗುತ್ತಿತ್ತು. ಇಂದು ನಸುಕಿನಲ್ಲಿ ಕೂಗಿದರೆ ಏನಾಗುತ್ತದೆ?



ಮಧ್ಯಾಹ್ನದ ಊಟಕ್ಕೆ ಚಿಕನ್ ಪಲಾವ್.

ವಿ. ಹೇಮಂತಕುಮಾರ್, ಬೆಂಗಳೂರು

ಹೆಂಡತಿ ಚುನಾವಣೆಗೆ ನಿಂತರೆ ಗಂಡ ಅವಳಿಗೆ ವೋಟ್ ಹಾಕ್ತಾನಾ?

ಪಕ್ಕದ ಮನೆಯ ಸುಂದರಿಯೂ ಸ್ಪರ್ಧಿಸದಿದ್ದರೆ ಮಾತ್ರ!

ಜೀವಿ, ಗೊಂಡೇದಹಳ್ಳಿ

ಒಂಟಿಹೆಣ್ಣು ಒಂಟಿಯಲ್ಲ, ಅವಳೊಡನೆ ಇಡೀ ಜಗತ್ತೇ ಇರುವುದೆಂಬ ಉಕ್ತಿಯಿದ್ದೂ ಅವಳನ್ನು ಅಬಲೆ ಎನ್ನುವುದೇಕೆ?

ಅದು ‘ಅಬ್ಬಾ...! ಲೇ...!’ ಎಂಬ ಅಚ್ಚರಿಭರಿತ ಮೆಚ್ಚುಗೆಯ ಹ್ರಸ್ವರೂಪವಂತೆ.

ರತ್ನಜ, ಮೈಸೂರು

ವ್ಯಕ್ತಿಯೊಬ್ಬನು ಏಕಕಾಲದಲ್ಲಿ ಸಜ್ಜನ ಮತ್ತು ರಾಜಕಾರಣಿ ಆಗಿರಲು ಸಾಧ್ಯವೆ?

ಶಾಸ್ತ್ರಿ, ಕಲಾಂ ಇದ್ದರಲ್ಲ. ಹನ್ನೊಂದು ಅಕ್ಷೋಹಿಣಿಯ ಮಧ್ಯೆ ಒಬ್ಬ ವಿಕರ್ಣ ಇರುತ್ತಾನೆ.

ಎಸ್.ಜಿ. ಹವಾಲದಾರ, ಬಾಗಲಕೋಟೆ

ಭ್ರಷ್ಟರ ಮನೆ ಮಿನಿ ಸ್ವಿಸ್ ಬ್ಯಾಂಕ್ ಅಂತೆ. ಹೌದಾ ಸರ್?

ಊಹೂಂ. ಸ್ವಿಸ್ ಬ್ಯಾಂಕಿನಲ್ಲಿ ಪೈಪು, ಕಮೋಡು, ಟ್ಯಾಂಕುಗಳಲ್ಲಿ ನೋಟುಗಳನ್ನು ಇಡುವುದಿಲ್ಲ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ

ಹಲ್ಲುನೋವಿಗೆ ಸಮಾನಾರ್ಥಕ ಪದ ಯಾವುದಿರಬಹುದು ಸರ್?

ಆನೆಯಂತೆ ಅರಚಲು ಪ್ರಚೋದಿಸುವ ಘೀಳುಬಾಧೆ.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು

ನೀವು ಎದುರಿಗೆ ಬಂದಾಗಲಾದರೂ ನನ್ನ ಪ್ರಶ್ನೆಗೆ ಉತ್ತರ ಸಿಗಬಹುದೇ ರಾಂ?

ಆಗದು. ನನ್ನನ್ನು ಕಂಡ ಸಂತಸದಲ್ಲಿ ನಿಮ್ಮಿಂದ ಪ್ರಶ್ನೆಯಿರಲಿ, ಮಾತೂ ಹೊರಡದಲ್ಲ!

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ಪ್ರಕೃತಿ, ಪುರುಷರಲ್ಲಿ ಯಾರು ಶ್ರೇಷ್ಠ?

ಪ್ರಕೃತಿಯೇ; ಸುನಾಮಿ, ಭೂಕಂಪಗಳ ಮುಂದೆ ನರಪೌರುಷ ತೃಣಸದೃಶ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಗುರುಗಳೆ, ನಮ್ಮ ಜೀವನದಲ್ಲಿ ಅತ್ಯಂತ ಸುಖ ಯಾವುದರಲ್ಲಿ ದೊರೆಯುತ್ತದೆ?

ಇಲ್ಲದ ಸುಖದ ಬೆನ್ನು ಹತ್ತದೆ ಇರುವ ಸುಖದಲ್ಲಿ ತೃಪ್ತಿ ಹೊಂದುವುದರಲ್ಲಿ.

ಅನಸೂಯ ಟಿ, ಕೇದಿಗೆಮನೆ

ಪಾರದರ್ಶಕ ಬಟ್ಟೆಗೂ, ಪಾರದರ್ಶಕ ಜೀವನಕ್ಕೂ ಇರುವ ವ್ಯತ್ಯಾಸ?

ಅದು ಬಾಲಿವುಡ್ಡಿನ ಜೀವಾಳ; ಇದು ಎಷ್ಟೇ ಹುಡುಕಿದರೂ ಸಿಗದಷ್ಟು ವಿರಳ.

## ಬಹುಮಾನಿತ ಪ್ರಶ್ನೆ

ಪಿ.ಜೆ. ರಾಘವೇಂದ್ರ, ಮೈಸೂರು

ಶಿಕ್ಷಣ ಸಚಿವ ಸುಶಿಕ್ಷಿತನಾಗಿರಬೇಕು. ಅಬಕಾರಿ ಸಚಿವ?

ತಪ್ಪಿತಸ್ಥರಿಗೆ ಸರಿಯಾಗಿ ಕಿಕ್ ಕೊಡುವಂತಿರಬೇಕು.

ಸುಧೀಂದ್ರ, ಬೆಂಗಳೂರು

ನಾನು ಈಗಲೂ ಬೂಸ್ಟ್, ಹಾರ್ಲಿಕ್ಸ್ ಕುಡಿಯೋದು ಅಂದ್ರೆ ನಗ್ತಾರಲ್ರೀ?

ದೈಹಿಕ ಶ್ರಮವಿದ್ದಾಗ ಅವು ಬೇಕಿತ್ತು. ವರ್ಕ್ ಫ್ರಂ ಹೋಮಿನ ವೃತ್ತೋದರದ ಕಾಲದಲ್ಲೂ ಅದೇಕೆಂದು ನಗೆಯಂತೆ.

ಹೆಚ್.ವಿ. ಶ್ರೀಧರ್, ಬೆಂಗಳೂರು

ಕ್ರಿಕೆಟ್‌ನಲ್ಲಿ ಮಹಿಳಾ ಅಂಪೈರ್‌ಗಳ ನಿರ್ಣಯವನ್ನು ತಕ್ಷಣ ಎಲ್ಲರೂ ಒಪ್ಪಿಕೊಳ್ಳುವರೆ?

ಮಹಿಳಾ ಸ್ಟ್ರೈಟ್ ಅಂಪೈರನ್ನು ಮಹಿಳಾ ಲೆಗ್ ಅಂಪೈರೇ ಒಪ್ಪಲಾರಳಂತೆ.

ಬಿ.ಆರ್. ಉಷಾ, ಕೆನಡಾ

ಸಖಿಗೂ, ಗಗನ ಸಖಿಗೂ ವ್ಯತ್ಯಾಸವೇನು?



ಸಖಿ ಪ್ರತಿ ಪ್ರಯಾಣದಲ್ಲಿ ಅಪಶಕುನವನ್ನು ನುಡಿಯುವುದಿಲ್ಲ.

ಕೇಶವಪ್ರಭು, ಶಿವಮೊಗ್ಗ

ಇರುಳಲ್ಲಿ ಸರಸಸಲ್ಲಾಪದಲ್ಲಿ ನಿದ್ರೆಗೆ ಜಾರುತ್ತಿದ್ದ ನಾವು ಟೀವಿ, ಮೊಬೈಲುಗಳಲ್ಲಿ ಮುಳುಗಿ ಅವೆಲ್ಲ ಗತಕಾಲಕ್ಕೆ ಸಂದವಲ್ಲ?

ನೆಟ್ ಆಫ್ ಮಾಡಿ ಮೊಬೈಲನ್ನು ಮೌನವಾಗಿಸಿದರೆ ಸರಸ ಮತ್ತೆ ತಲೆಯೆತ್ತೀತು.

ರಾಜಶೇಖರ ಹಾದಿಮನಿ, ಧಾರವಾಡ

ಉತ್ತರ–ದಕ್ಷಿಣ ಕಂಟಕ ನಿವಾರಿಸಲು ಮಧ್ಯದಲ್ಲಿ ವಿಧಾನಸೌಧ ಕಟ್ಟಿಸಿದರೆ ಸರಿಯಾಗಲಾರದೆ?

ಮುಖಂಡರ ಎರಡು ಕಿವಿಗಳ ಮಧ್ಯದ ‘ಚಿಂತನಾ ವಿಧಾನ’ ಸರಿಯಾದರೆ ಸಾಕು.

■ ರಾಮ್